ಕಥೆ



ತೆಲುಗು ಮೂಲ: **ಪೋಟ್ಲೂರಿ ಸುಬ್ರಮಣ್ಯಂ**
ಕನ್ನಡಕ್ಕೆ: **ಟಿ.ಎಸ್. ನಾಗರಾಜ ಶೆಟ್ಟಿ**
ಕಲೆ: ವಿಶ್ವನಾಥ್ ಎ.ಎಸ್.



# ಕಡಲುಗಳ್ಳ

'ತಾತಾ.... ತಾತಾ...' ಎಂದು ಯಾರೋ ಕೂಗಿದಂತಾಗಿ ಆಗ ತಾನೇ ಪೂಜೆ ಮುಗಿಸಿದ್ದ ರಾಮಚಂದ್ರಯ್ಯ ದೇವರ ಮುಂದಿಟ್ಟಿದ್ದ ಬಾಳೆಯಹಣ್ಣು ತೆಗೆದುಕೊಂಡು ಹೊರಬಂದರು. ಎದುರಿಗೆ ನಿಂತಿದ್ದ 25 ವರ್ಷಗಳ ಕುಮಾರಪ್ಪ ಅವರ ಕಾಲಿಗೆ ಬಿದ್ದು ನಮಸ್ಕರಿಸಿದ.

ಎರಡೂ ಕೈಗಳನ್ನು ಅವನ ತಲೆಯ ಮೇಲಿರಿಸಿ ಆಶೀರ್ವದಿಸಿ, ಅವನನ್ನು ಹಿಡಿದೆಬ್ಬಿಸಿ ಕೈಯಲ್ಲಿದ್ದ ಬಾಳೆಯ ಹಣ್ಣನ್ನು ಪ್ರಸಾದವಾಗಿ ನೀಡಿದರು. ಅದನ್ನು ಕಣ್ಣಿಗೆ ಮುಟ್ಟಿಸಿಕೊಂಡು ಕೈಯಲ್ಲಿ ಹಿಡಿದುಕೊಂಡ ಕುಮಾರಪ್ಪ.

'ತಾತಾ ಅಮ್ಮನಿಗೆ ಜ್ವರ ಬಂದಿದೆ. ಮಾತ್ರೆ ಕೊಡು' ಅಂದ. ಒಳ ಹೋಗಿ ಮಾತ್ರೆಯನ್ನು ಕಾಗದದಲ್ಲಿ ಸುತ್ತಿ ತಂದು ಕುಮಾರಪ್ಪನ ಕೈಗಿಟ್ಟ ತಾತ.

ಕುಮಾರಪ್ಪನೆಂದರೆ ರಾಮಚಂದ್ರನಿಗೆ ಇನ್ನಿಲ್ಲದ ಅಭಿಮಾನ. ಅವನಿಗೆ ಆರು ವರ್ಷಗಳಾಗಿದ್ದಾಗ ಅವನ ತಂದೆ ಸುಬ್ಬಯ್ಯ ಅಕಾಲ ಮರಣಕ್ಕೀಡಾದರು. ಆಗ ಅವನ ತಾಯಿ ತುಂಬು ಗರ್ಭಿಣಿ.

ವಿಶಾಲವಾದ ಕಡಲಿನಲ್ಲಿ ಅಲೆಗಳಿಲ್ಲದ ಎಡೆಯಲ್ಲಿ ತನ್ನ ಮರದ ದೋಣಿಯಲ್ಲಿ ಒಬ್ಬನೇ ಒಂಟಿಯಾಗಿ ಕುಳಿತು ಮೀನು ಹಿಡಿಯುತ್ತಿದ್ದಾನೆ ಕುಮಾರಪ್ಪ. ಅದು ತೀರಕ್ಕೆ ಸುಮಾರು 10 ಕಿಲೋ ಮೀಟರುಗಳಷ್ಟು ದೂರದಲ್ಲಿದ್ದ ಪ್ರದೇಶ.

ಇವತ್ತೇ ಮೀನಿನ ಬೇಟೆಗೆ ಕೊನೆಯ ದಿನ. ನಾಳೆಯಿಂದ ಎರಡು ತಿಂಗಳ ಕಾಲ ಮೀನಿನ ಬೇಟೆ ನಿಷಿದ್ಧ. ಏಕೆಂದರೆ ಈ ಕಾಲದಲ್ಲೇ ಮೀನುಗಳು ಮೊಟ್ಟೆ ಇಟ್ಟು ಮರಿಗಳನ್ನು ಮಾಡಿ, ಮತ್ಸ್ಯ ಸಂಪತ್ತನ್ನು ವೃದ್ಧಿಪಡಿಸುತ್ತವೆ. ಈ ಅವಧಿಯಲ್ಲಿ ಜಾಲಗಾರರು ಮನೆಯಂಗಳದ ಮರಗಳ ನೆರಳಿನಲ್ಲಿ ಕುಳಿತು ಹೊಸ ಬಲೆಗಳನ್ನು ನೇಯುತ್ತ, ಹರಿದ ಹಳೆಯ ಬಲೆಗಳನ್ನು ಹೊಲಿಯುತ್ತ, ಹರಟೆ ಹೊಡೆಯುತ್ತ ಕಾಲ ಕಳೆಯುತ್ತಾರೆ.

ಕೆಳಗಿನ ಅನಂತವಾದ ಜಲರಾಶಿಯ ಮೇಲೆ ಕೆಂಡ ಕಾರುತ್ತಿರುವ ಸೂರ್ಯ. ಕಡಲ ಮೇಲೆ ಇರುವುದರಿಂದ ಆತನಿಗೆ ಸೂರ್ಯನ ಬೇಗೆ ನೆಲದ ಮೇಲಿನದಕ್ಕಿಂತ ಬಹಳ ಕಡಿಮೆ. ಹೊಟ್ಟೆಯಲ್ಲಿ ಇಲಿಗಳು ಓಡಾಡುತ್ತಿದ್ದುದರಿಂದ ಬಳ್ಳದಲ್ಲಿದ್ದ ಗಂಜಿಯನ್ನು ಎತ್ತಿ ಹೊಟ್ಟೆ ತುಂಬಾ ಕುಡಿದ.

ಸಂಜೆ ನಾಲಕ್ಕಾದರೂ ಅವನ ಶ್ರಮಕ್ಕೆ ತಕ್ಕಂತೆ ಮೀನು ಸಿಗಲಿಲ್ಲ. 'ಹೊತ್ತು ಮುಳುಗುತ್ತಿದೆ. ಈ ಹೊತ್ತಿಗೆ ಇಷ್ಟು ಸಾಕು' ಅಂದುಕೊಳ್ಳುತ್ತ ದೋಣಿಯನ್ನು ತೀರದ ಕಡೆಗೆ ತಿರುಗಿಸಿದ. ಕಡಲ ಮೇಲಿನ ಗಾಳಿಗೆ ಪ್ರಾರಂಭವಾದ ಕಿರು ತೆರೆಗಳು ದಡಕ್ಕೆ ಬರುವ ವೇಳೆಗೆ ಎತ್ತರವಾಗಿ ಬಲವಾಗಿ ಮಾರ್ಪಟ್ಟು ದಡಕ್ಕೆ ಬಡಿಯುತ್ತ ದೊಡ್ಡ ಸದ್ದಿನೊಂದಿಗೆ ಘೋಷ ಹೊರಡಿಸುತ್ತಿವೆ.